Supply of Arrack to South Kanara District.

408. Sri M. H. JAYAPRAKASH NARAYAN (Sirsi) [On behalf of SMT. WINNIFRED F. FERNANDES (Coondapur)].—

Will the Minister for Finance, Planning, Commerce and Industries be pleased to state :—

(*a*) whether the Government are aware, that during January 1968, the supply of Arrack to the Licensed Arrack shopkeepers of Coondapur, Udipi and Karkala Taluks of South Kanara, was sufficient for about 8 to 10 days only, in the month ;

(*b*) whether representations in this regard were made to the various District and State Authorities, and that no effective action was taken to improve the supply position till date ;

(*c*) whether it is not a fact that as a result of irregular and insufficient supply of Arrack to these shops, illicit distillers are again on the active, and are making bigger profits than before ;

(*d*) the reasons for not supplying adequate quantity of Arrack to shops in South Kanara so far and the time required by them to do so ?

A.—Sri RAMAKRISHNA HEGDE (Minister for Finance, Planning, Commerce and Industries).—

(*a*) The Government have been informed regarding the short supply of the arrack.

(*b*) Yes ; but effective steps are being taken to improve the supply position.

(*c*) The fact has not come to the notice of Government.

(*d*) The unexpected increase of demand of arrack.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಮೊದಲನೆಯ ಪ್ರಶ್ನೆಯಲ್ಲಿ ಎಂಟು ಹತ್ತು ದಿನಗಳಿಗೆ ಮಾತ್ರ ಸಾಕಾಗುವಷ್ಟಿದ್ದಿತಂಬುದು ಸರ್ಕಾರದವರಿಗೆ ಗೊತ್ತಿದೆಯೇ ಎಂದು ಕೇಳಿದ್ದಕ್ಕೆ ಉತ್ತರವಾಗಿ ಸಾರಾಯಿಯನ್ನು ಕಡಮೆ ಪ್ರಮಾಣದಲ್ಲಿ ಸರಬರಾಜು ಮಾಡುತ್ತಿರುವ ಬಗ್ಗೆ ಸರ್ಕಾರದವರಿಗೆ ತಿಳಿಸಲಾಗಿದೆಯೆಂದು ಹೇಳಲಾಗಿದೆ. ಅಂದರೆ ಹೆಂಡ ಕಡಿಮೆ ಸರಬರಾಯಿ ಆಗುತ್ತಿದೆ ಎನ್ನುವುದನ್ನೂ ಈ ಸರ್ಕಾರದವರು ಬೇರೆ ಸರ್ಕಾರದವರಿಗೆ ತಿಳಿಸಿದ್ದಾರೆಯೇ ?

ಶ್ರೀ ರಾಮಕೃಷ್ಣ ಹೆಗಡೆ.—ಕನ್ನಡದ ತರ್ಜುಮೆಯನ್ನು ನಾನು ನೋಡಿಲ್ಲ. ಇಂಗ್ಲೀಷ್‌ನಲ್ಲಿ ಸರಿಯಾದ ಉತ್ತರವಿದೆ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಸರ್ಕಾರದವರು ಈ ಜಿಲ್ಲೆಗೆ ಸಾಕಷ್ಟು ಪ್ರಮಾಣದಲ್ಲಿ ಸಾರಾಯಿಯನ್ನು ಸರಬರಾಜು ಮಾಡದಿದ್ದರಿಂದ ಕಳ್ಳಭಟ್ಟಿ ತಯಾರಕರು ಹೆಚ್ಚುವುದಕ್ಕೆ ಕಾರಣವಾಯಿತು. ಕಳ್ಳಭಟ್ಟಿ ತಯಾರು ಮಾಡುವ ಎಷ್ಟು ಜನರನ್ನು ಬುಕ್ ಮಾಡಿರಾಯಿತು ಎಂಬುದನ್ನು ತಿಳಿಸುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಹೆಚ್ಚಿನ ಕೇಸ್‌ಗಳನ್ನು ಸರ್ಕಾರದವರು ಬುಕ್ ಮಾಡಿಲ್ಲ. ಅಂತಹ ಕೇಸ್‌ಗಳು ಸಹ ಕಂಡುಬಂದಿಲ್ಲ. 15-10-1966ರಿಂದ 15-2-1967ರವರೆಗೆ ಇಂತಹ 252 ಕೇಸ್‌ಗಳನ್ನು ಹಿಡಿದಿದ್ದರೆ 15-10-1967ರಿಂದ 15-2-1968ರವರೆಗೆ ಇಂತಹ ಕೇಸ್‌ಗಳು ಸಿಗಲಲ್ಲ. ಆದರೂ ಸಹ ರೇಡ್ ಮಾಡಿ ಡಿಟೆಕ್ಟ್ ಮಾಡಿ 25 ಕೇಸ್‌ಗಳನ್ನು ಹಿಡಿದಿದ್ದಾರೆ. ಕಳ್ಳಭಟ್ಟಿ

(ಶ್ರೀ ರಾಮಕೃಷ್ಣ ಹೆಗಡೆ)

ತಯಾರಕರು ಹೆಚ್ಚಾಗಿದ್ದಾರೆಂದು ಒಪ್ಪುವುದಕ್ಕಾಗುವುದಿಲ್ಲ. ಈಗ ಸಾರಾಯಿಯ ಬೇಡಿಕೆ ಹೆಚ್ಚು ಇದ್ದು ಪೂರ್ತಿಕೆ ಕಡಿಮೆಯಿರುವುದರಿಂದ ಈ ರೀತಿ ತೊಂದರೆಯಾಗಿದೆ. ಮಂಗಳೂರು ಜಿಲ್ಲೆಗೆ ಬೇರೆ ಜಿಲ್ಲೆಗಿಂತ ಹೆಚ್ಚು ಸಾರಾಯಿಯನ್ನು ಸರಬರಾಜು ಮಾಡಿದ್ದೇವೆ. ಕಳೆದ ತಿಂಗಳು 1,85,000 ಲೀಟರ್‌ನಿಂದ 1,90,000 ಲೀಟರ್‌ವರೆಗೆ ಸರಬರಾಜು ಮಾಡಿದ್ದರೂ ಸಹ ಅವರಿಗೆ ಸಾಕಾಗುತ್ತಿಲ್ಲ.

ಶ್ರೀ ಬಿ. ಭಾಸ್ಕರಶೆಟ್ಟಿ.—ಮಾನ್ಯ ಮಂತ್ರಿಗಳು ಈಗ ತಮಾಷೆಯಾಗಿ ಉತ್ತರ ಕೊಟ್ಟರು. ಮೈಸೂರು ರಾಜ್ಯಕ್ಕೆ ಸಾರಾಯಿಯಿಂದ ಒಟ್ಟು 13,03,668 ರೂಪಾಯಿಗಳ ವರಮಾನ ಬರುತ್ತಿದೆ. ಇಷ್ಟು ಹಣದಲ್ಲಿ ಸುಮಾರು ಎರಡೂವರೆ ಲಕ್ಷ ರೂಪಾಯಿಗಳಷ್ಟು ಮಂಗಳೂರು ಜಿಲ್ಲೆಯೊಂದರಿಂದಲೇ ಬರುತ್ತಿದೆ. ಅಂದರೆ ಐದನೇ ಒಂದು ಅಂಶ ಬರುತ್ತಿದೆ. ಆದರೆ ಕಳೆದ ಒಂದೂವರೆ ತಿಂಗಳಲ್ಲಿ ಒಂದು ದಿನಕ್ಕೆ 300 ಲೀಟರ್‌ನಂತೆಯೂ ಸಹ ಸರಬರಾಜು ಮಾಡಿಲ್ಲ. ಮಂಗಳೂರಿಗೆ ದಿನಕ್ಕೆ 335 ಲೀಟರ್ ಸರಬರಾಜು ಮಾಡಿದರೆ ಪುತ್ತೂರಿಗೆ ದಿನಕ್ಕೆ 155 ಲೀಟರ್ ನಂತೆ ಸರಬರಾಜು ಮಾಡುತ್ತಿದ್ದೀರಿ. ಈ ರೀತಿ ಕಡಿಮೆ ಸರಬರಾಜು ಮಾಡುವುದರಿಂದ ಕಳೆದ ಒಂದೂವರೆ ತಿಂಗಳಲ್ಲಿ ಸರ್ಕಾರಕ್ಕೆ 44 ಲಕ್ಷ ರೂಪಾಯಿಗಳು ಎಕ್ಸ್‌ಸೈಸ್ ಟ್ಯಾಕ್ಸ್‌ನಿಂದಲೂ ಮತ್ತು ಹೆರ್ತ್ ಟ್ಯಾಕ್ಸ್‌ನಿಂದಲೂ ಲುಕ್ಸಾನಾಗಿದೆ. ಆದ್ದರಿಂದ ಸರ್ಕಾರದ ಖಜಾನೆಗೆ ಬರುವ ಹಣದ ದೃಷ್ಟಿಯಿಂದ ಇನ್ನು ಮುಂದೆ ಹೆಚ್ಚು ಸಾರಾಯಿಯನ್ನು ಸರಬರಾಜು ಮಾಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ನಮ್ಮ ಹತ್ತಿರ ಸಾಕಷ್ಟು ಸಂಗ್ರಹವಿದ್ದರೆ ಮಾನ್ಯ ಸದಸ್ಯರು ಕೇಳುವುದಕ್ಕೆ ಮೊದಲೇ ಸರಬರಾಜು ಮಾಡುತ್ತಿದ್ದೆವು. ಮಾನ್ಯ ಸದಸ್ಯರುಗಳಿಗೆ ತಿಳಿಸುವುದೇ ನೆಂದರೆ ಕಳೆದ ಎರಡು ವರ್ಷಗಳಲ್ಲಿ ಕಬ್ಬು ಸಾಕಷ್ಟು ಬೆಳೆಯದಿದ್ದರಿಂದ ಸಕ್ಕರೆ ಉತ್ಪತ್ತಿ ಕಡಿಮೆಯಾಯಿತು. ಇದರಿಂದ ಮೊರಾಸಸ್ ಸಿಗುತ್ತಿಲ್ಲ. ಇದು ಸಿಗದಿರುವುದರಿಂದ ಸ್ಪಿರೀಟ್ ತಯಾರು ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಕಳೆದ ಎರಡು ವರ್ಷಗಳಿಂದ ವಿಷಮ ಪರಿಸ್ಥಿತಿ ಇದ್ದರೂ ಸಹ ಇನ್ನು 6 ತಿಂಗಳ ನಂತರ.....

ಶ್ರೀ ಎಚ್. ಸಿದ್ದವೀರಪ್ಪ.—ಸಿಂಥೆಟಿಕ್ ವಸ್ತುಗಳನ್ನು ಉಪಯೋಗಿಸಬಹುದಲ್ಲಾ ;

ಶ್ರೀ ರಾಮಕೃಷ್ಣ ಹೆಗಡೆ.—ಅವುಗಳನ್ನು ಉಪಯೋಗಿಸಬಾರದೆಂದೇ ಇದನ್ನು ಮಾಡಿರುವುದು.

ಶ್ರೀ ಎಸ್. ಶಿವಪ್ಪ.—ಕಳೆದ 20 ವರ್ಷಗಳಿಂದ ಪಾನನಿರೋಧವನ್ನು ಜಾರಿಗೆ ತಂದು ಈಗ ಮತ್ತೆ ಸಡಿಲಗೊಳಿಸಿದ್ದೀರಿ. ಪಾನನಿರೋಧವನ್ನು ಜಾರಿಗೆ ತಂದಾಗ ಕುಡಿಯುವವರ ಸಂಖ್ಯೆ ಎಷ್ಟಿತ್ತು, ಈಗ ಸಡಿಲಗೊಳಿಸಿದಮೇಲೆ ಕುಡಿಯುವವರ ಸಂಖ್ಯೆ ಎಷ್ಟಿದೆ ಎಂಬುದನ್ನು ಹೇಳುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಮೊದಲಗಿಂತ ಈಗ ಕುಡಿಯುವವರು ಹೆಚ್ಚಾಗಿದ್ದಾರೆ. ಎಷ್ಟರಮಟ್ಟಿಗೆ ಹೆಚ್ಚಾಗಿದ್ದಾರೆ ಎಂಬುದನ್ನು ಅಂಕಿ ಅಂಶಗಳ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

ಶ್ರೀಮತಿ ಕೆ. ಲೀಲಾವತಿ ರೈ.—ಸ್ವಾಮಿ, ತಾವು ಶರಾಬು ಸಿಗುತ್ತಿಲ್ಲವೆಂದು ಹೇಳುತ್ತಿದ್ದೀರಿ. ಆದರೆ ಕೆಲವೊಂದು ಆರ್ಡಿಗಳು ಗೇರುಹಣ್ಣಿನಿಂದ ಇದನ್ನು ತಯಾರುಮಾಡಬೇಕೆಂದು ನಿಮಗೆ ಬಂದಿದೆ. ಅದನ್ನು ಇಷ್ಟರವರೆಗೆ ಪರಿಶೀಲಿಸಿದ್ದು ಕಂಡುಬರುವುದಿಲ್ಲ. ಆದರಿಂದ ಅದನ್ನು ಬೇಗನೆ ಮಾಡಿದರ ಕಷ್ಟ ನಿವಾರಣೆಯಾಗುತ್ತದೆ ಮತ್ತು ಸರ್ಕಾರಕ್ಕೆ ಉತ್ಪತ್ತಿಯೂ ಜಾಸ್ತಿಯಾಗುತ್ತದೆ ; ಅದನ್ನು ಬೇಗನೆ ಮಾಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಗೇರುಬೀಜದಿಂದ ಮಾಡುವುದಕ್ಕೆ ಅನುಮತಿ ಕೊಡಬೇಕೆಂದು ಸರ್ಕಾರ ನಿರ್ಧಾರ ಮಾಡಿದೆ.

ಶ್ರೀ ಎಂ. ಪಿ. ಜಯಪ್ರಕಾಶ್ ನಾರಾಯಣ.—ಕಳ್ಳಭಟ್ಟಿ ತಯಾರುಮಾಡಕಕ್ಕೆ ಪ್ರದೇಶದಲ್ಲಿ ಅದನ್ನು ವಿಶೇಷವಾಗಿ ಕಡಮೆ ಬೆಲೆಯಲ್ಲಿ ಸಿಗುವುದರಿಂದ ಜನರು ಹೆಚ್ಚಾಗಿ ಕುಡಿದು ಆರೋಗ್ಯವನ್ನು ಕೆಡಿಸಿಕೊಳ್ಳುತ್ತಾರೆ. ಕೇರಳದಲ್ಲಿ ಈ ಪೆಟ್ರೋಲ್ಡ್ ಲಿಕರ್ಸ್ ಏನಿದೆ, ಅದಕ್ಕೆ ಡ್ಯೂಟಿ, ಟ್ಯಾಕ್ಸ್ ಕಡಿಮೆ ಮಾಡಿದ್ದಾರೆ. ಅದೇ ರೀತಿ ಇಲ್ಲಿಯೂ ಕಡಿಮೆ ರೇಟ್ ಮಾಡಿ, ಸುಲಭ ಬೆಲೆಯಲ್ಲಿ ಸ್ವಚ್ಛವಾದ ಲಿಕರ್ಸ್ ದೊರೆಯುವಂತೆ ಮಾಡುತ್ತೀರಾ ಸ್ವಾಮಿ ?

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಸದಸ್ಯರ ಪ್ರಶ್ನೆ ವಿರೋಧ ಅಭಿಪ್ರಾಯದಿಂದ ಕೂಡಿದೆ. ಅವರು ಹೇಳುತ್ತಾರೆ, ಸರಾಯಿ ಮೇಲೆ ಟ್ಯಾಕ್ಸ್ ಕಡಿಮೆಮಾಡಬೇಕೆಂದು. ಆದರೆ ಅದು ಮೈರ್ಡ್ ಲಕರ್ ಅಲ್ಲ. ಮೈರ್ಡ್ ಲಕರ್ಸಿಗೆ ಕಡಿಮೆಮಾಡಿದರೂ ಕೂಡ ಅದರಿಂದ ಹೆಚ್ಚು ಪ್ರಯೋಜನವಾಗುವುದಿಲ್ಲ. ಈಗ ಅದನ್ನು ಕಡಿಮೆಮಾಡಬೇಕೋ, ಹೆಚ್ಚು ಮಾಡಬೇಕೋ ಎಂಬ ವಿಚಾರದಲ್ಲಿ ಮುಂದಿನ ವರ್ಷ ಸರ್ಕಾರ ತೀರ್ಮಾನ ಮಾಡುತ್ತದೆ. ಈ ವರ್ಷ ಆಗಲೇ ಕಂಟ್ರಾಕ್ಟರುಗಳಿಗೆ ಕೊಟ್ಟುಬಿಟ್ಟಿದ್ದೇವೆ.

ಶ್ರೀ ಎಚ್. ಸಿದ್ದವೀರಪ್ಪ.—ಈಗ ತಾವು ಕೊಟ್ಟಿರುವ ಅಂಕಿಅಂಶಗಳನ್ನು ನೋಡಿದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇದರ ದಾಹ ಬಹಳ ಹೆಚ್ಚಾಗಿದೆ ಎಂದು ಅರ್ಥವಾಗುತ್ತದೆ. ಆದ್ದರಿಂದ ಅಲ್ಲಿ ಮಾಡುವ ಫರ್ಚೆಸರ್ ಫ್ಯಾಕ್ಟರಿ ಬಿಟ್ಟು ಒಂದು ಡಿಸ್ಟಿಲರಿ ಸ್ಯಾಂಕ್ಷನ್ ಮಾಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಡಿಸ್ಟಿಲರಿ ಮಾಡಬಹುದಿತ್ತು. ಆದರೆ ಅಲ್ಲಿ ಕಬ್ಬು ಬೆಳೆಯುವುದಿಲ್ಲ. ಅದರಿಂದ ಅಲ್ಲಿ ಮೊರೇಸಸ್ ಬರುವುದಿಲ್ಲ. ಮೊದಲು ಕಬ್ಬು ಸಾಗುವಳಿ ಮಾಡಬೇಕು. ಆಮೇಲೆ ಸಕ್ಕರೆ ಕಾರ್ಖಾನೆ ಆಗಬೇಕು. ಆಮೇಲೆ ಡಿಸ್ಟಿಲರಿ ಮಾಡಬಹುದು.

ಶ್ರೀ ಬಿ. ಭಾಸ್ಕರ ಶೆಟ್ಟಿ.—ನಮ್ಮ ಜಿಲ್ಲೆಯ ಅಂಗಡಿಗಳಲ್ಲಿ ಸಮಯಕ್ಕೆ ಸರಿಯಾಗಿ ಸಾರಾಯಿ ಸಪ್ಲೈ ಮಾಡದಿರುವುದರಿಂದ, ಸಾಧಾರಣ ಕಂಟ್ರಾಕ್ಟರುಗಳೇ, 100 ಕ್ಕೆ 75 ಭಾಗ ಇಲ್ಲಸಿಟ್ ಲಕರ್ ಮಾಡುತ್ತಾರೆ. ಇದಕ್ಕೆ ತಮ್ಮ ಎಕ್ಸೈಸ್ ಇಲಾಖೆಯವರು ರಕ್ಷಣೆ ಕೊಡುತ್ತಿದ್ದಾರೆ. ಇದನ್ನು ನಿಲ್ಲಿಸುವುದಕ್ಕೆ ಪ್ರಯತ್ನಮಾಡಿ, ಅಲ್ಲಿಗೆ ಅದಷ್ಟು ಹೆಚ್ಚು ಸಾರಾಯಿ ಒದಗಿಸುವಂತೆ ನೋಡಬೇಕು. ಅದಲ್ಲದೆ ತಾವು ಲೂಸ್ ಸಾರಾಯಿ ಸಪ್ಲೈ ಮಾಡಿದರೆ, ಅದಕ್ಕೆ ನೀರನ್ನು ಸೇರಿಸಿ ಕೊಡುತ್ತಿದ್ದಾರೆ. ಅದಕ್ಕೋಸ್ಕರ ಅದನ್ನು ಬಾಟ್ಲಿಗಳಲ್ಲಿ ಸೀಲ್ ಮಾಡಿ ಕೊಟ್ಟರೆ ಯೋಗ್ಯರೀತಿಯಲ್ಲಿ ಮಾರಾಟಮಾಡುವುದಕ್ಕಾಗುತ್ತದೆ. ಅದ್ದರಿಂದ ಇವುಗಳನ್ನು ಬಾಟ್ಲಿಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ ಸಪ್ಲೈ ಮಾಡುವಂತೆ ಏರ್ಪಾಟು ಮಾಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ದಕ್ಷಿಣ ಕನ್ನಡ ಜಿಲ್ಲೆಗೆ ಜನವರಿ ತಿಂಗಳಲ್ಲಿ ಒಂದು ಲಕ್ಷ 12 ಸಾವಿರದ 900 ಲೀಟರ್ ಅರಕ್ ಸಪ್ಲೈ ಮಾಡಿದೆ. ಫೆಬ್ರುವರಿಯಲ್ಲಿ ಒಂದು ಲಕ್ಷದ 8 ಸಾವಿರ ಲೀಟರ್ ಸಪ್ಲೈ ಮಾಡಿದೆ. ಮಾರ್ಚ್ ತಿಂಗಳಲ್ಲಿ ಒಂದು ಲಕ್ಷ 8 ಸಾವಿರ ಲೀಟರ್ ಸಪ್ಲೈ ಮಾಡಿದೆ. ಮಾನ್ಯ ಸದಸ್ಯರಿಗೆ ಪುನಃ ಹೇಳುವುದಿಷ್ಟೆ. ನಮ್ಮ ಹತ್ತಿರ ಸಾಕಷ್ಟು ಪೂರೈಕೆ ಇಲ್ಲದಿರುವುದರಿಂದ ಸಾಕಷ್ಟು ಒದಗಿಸುವುದಕ್ಕೆ ಕಷ್ಟವಾಗುತ್ತದೆ. ಇದರಿಂದ ಸ್ವಲ್ಪ ಮಟ್ಟಿಗೆ ಕಳ್ಳಭಟ್ಟಿ ತಯಾರಿಕೆಗೆ ಸ್ವಲ್ಪ ಪ್ರೋತ್ಸಾಹ ಸಿಕ್ಕಿದೆ ಎಂಬುದು ನನ್ನ ಗಮನಕ್ಕೆ ಬಂದಿದೆ. ಮಾನ್ಯ ಸದಸ್ಯರು ನನಗೆ ಒಂದು ಇನ್‌ಫಾರ್ಮೇಶನ್ ಕೊಟ್ಟಿದ್ದಾರೆ. ಅದರ ಮೇಲೆ ಕೂಡಲೇ ಕ್ರಮ ತೆಗೆದುಕೊಂಡಿದ್ದೇವೆ. ಅದನ್ನು ರೈಡ್ ಮಾಡಿದ್ದಾರೆ. ಅದರ ಬಗ್ಗೆ ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ. ಎಲ್ಲಿಯವರೆಗೆ ಸಾರಾಯಿ ಪೋಷನ್ ಹೆಚ್ಚು ಅನುಕೂಲದಾಯಕವಾಗುವುದಿಲ್ಲವೋ, ಅಲ್ಲಿಯವರೆಗೆ ಸ್ವಲ್ಪ ಕಷ್ಟವಾಗುತ್ತದೆ. ಮತ್ತು ಬಾಟ್ಲಿಗಳಲ್ಲಿ ಒದಗಿಸುವುದನ್ನು ಮಾನ್ಯ ಸದಸ್ಯರು ಹೇಳಿದರು. ಅದನ್ನು ಮುಂದಿನ ವರ್ಷ ಜಾರಿಗೆ ಯೋಜನೆ ತರುವುದಕ್ಕೆ ಮಾಡುತ್ತೇವೆ.

ಶ್ರೀ ಎಚ್. ಎನ್. ನಂಜೇಗೌಡ.—ಈಗ ಈ ಕ್ಯಾಶ್ಯುನೆಟ್‌ನಿಂದ ಒಂದು ಹೆನ್ನಿ ತರ ಲಕರ್ ತಯಾರುಮಾಡುವುದಕ್ಕೆ ಎಷ್ಟೋ ಅರ್ಜಿಗಳು ಬರುತ್ತವೆ. ಅದರಿಂದ ಸಣ್ಣ ಕೈಗಾರಿಕೆಗಳಿಗೆ ಪ್ರೋತ್ಸಾಹ ಕೊಟ್ಟಂತೆಯೂ ಆಗುತ್ತದೆ. ಆದ್ದರಿಂದ ಇದನ್ನು ಒಂದು ಸ್ಮಾರ್ ಸ್ಕೇರ್ ಇಂಡಸ್ಟ್ರೀಸ್ ಎಂದು ಕನ್‌ಸಿದರ್ ಮಾಡಿ ರೈಸೆನ್ಸ್ ಕೊಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಗೇರು ಹಣ್ಣಿನಿಂದ ಹೇಗೆ ಮಾಡುತ್ತಾರೆ ಎನ್ನುವುದು ನಮಗೆ ಸರಿಯಾಗಿ ಗೊತ್ತಿಲ್ಲ. ಇದನ್ನು ಆ ಹೆಸರಿನಿಂದ ಕರೆಯುವುದು ಸೂಕ್ತವಲ್ಲ ಎಂದು ಇಲ್ಲಿ ಹೆನ್ನಿ ಎಂದು ಬೇರೆ ಹೆಸರಿನಲ್ಲಿ ಕರೆಯುವುದು ಸರಿಯಾಗಿದೆ ಎಂದು ಇದನ್ನು ಮಾಡಲಿಕ್ಕೆ ಆ ಸರಕಾರ ಅನುಮತಿ ಕೊಡುತ್ತಿದ್ದಾರೆ.

ಶ್ರೀಮತಿ ಕೆ. ಲೀಲಾವತಿ ರೈ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರೈಸೆನ್ಸ್ ಕೊಡಬೇಕು ಎಂದು ಇಲ್ಲಿ ಹೆಚ್ಚು ಜನರು ಹೆನ್ನಿ ಎಂದು ಮಾಡಲಿಕ್ಕೆ ರೈಸೆನ್ಸ್‌ನ ಕೇಳುತ್ತಿದ್ದಾರೆ. ಆದರೆ ಇಲ್ಲಿಗೆ ಹೆಚ್ಚು ಸಾರಾಯಿನ್ನು ಕಳುಹಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ ಎಂದು ಹೇಳುತ್ತಾರೆ. ಆದರೆ ಮಂಗಳೂರು ಕಡೆಯ ಜನರಿಗೆ ಇದರಿಂದ ಬಹಳ ಕಷ್ಟಗಳಾಗುತ್ತಿವೆ. ಇದನ್ನು ಸರಕಾರ

(ಶ್ರೀಮತಿ ಕೆ. ಲೀರಾವತಿ ರೈ)

ಸರಿಯಾಗಿ ಪರಿಶೀಲನೆ ಮಾಡಿ ಗೇರುಬೀಜದಿಂದ ಮಾಡುವವರಿಗೂ ಲೈಸನ್ಸ್ ಕೊಡುವುದರ ಬಗ್ಗೆ ಯೋಚನೆ ಮಾಡುತ್ತಾ ಇರುತ್ತೇ ?

ಶ್ರೀ ರಾಮಕೃಷ್ಣ ಹೆಗಡೆ.—ಇಲ್ಲಿ ಗೇರುಹಣ್ಣಿನಿಂದ ಮಾಡುವಾಗ ಇಲ್ಲಿಸಿಟ್ ಡಿಸ್ಟಿಲೇಷನ್ ಮಾಡುತ್ತಾರೋ ಏನೋ ನಮಗೆ ಸರಿಯಾಗಿ ಗೊತ್ತಾಗುತ್ತಿಲ್ಲ. ಗೇರುಬೀಜದಿಂದ ಇದು ಆಗುತ್ತೋ ಇಲ್ಲವೋ ಗೊತ್ತಿಲ್ಲ. ಇದಕ್ಕಾಗಿಯೇ ಇಲ್ಲಿ ಪೆನ್ನಿ ಎಂದು ಬೇರೆ ರೀತಿಯಾದ ಹೆಸರನ್ನು ಇಟ್ಟು ಈ ಬ್ರಾಂಡು ಮೂಲಕ ಮಾರಲು ಇದರೊಳಗೆ ಮಾಡುತ್ತಿದ್ದಾರೆ.

Release of Amrutmahal Kaval for cultivation

409. Sri G. T. GOVINDA REDDY (Madhugiri).—

Will the Minister for Labour, Animal Husbandry, Fisheries and Sericulture be pleased to state :—

(*a*) whether it is a fact that they have come to a decision to release some portion of Amrutmahal Kaval for cultivation ;

(*b*) the decision taken in respect of the mode of distribution ;

(*c*) the extent of land distributed (detailed information regarding the extent of land to be distributed, etc., may please be supplied) ?

A.—Sri D. DEVARAJ URS (Minister for Labour, Animal Husbandry, Fisheries and Sericulture).

(*a*) Yes.

(*b*) The lands have been released to the Revenue Department for grant to agricultural purposes as per Land Grant Rules in force.

(*c* 27,807-20 Acres. Statement attached.

STATEMENT

Government Order No. AF 60 VLS 67, dated.....November 1967.

Sl. No.	Name of the Kaval	District	Extent	Remarks
1	2	3	4	5
1	Iyanakere	Chickmagalur	2760-00	
2	Boochanahalli	do and Hassan	2188-00	
3	Devanur	Chickmagalur	98-00*	300 acres recently released.
4	Yemmedoddi	do	4800-00	